Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

# ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

16—3—1962

ಸ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

## ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ಭಾಷಣ

ಬೆಂಗಳೂರು 15— ರಾಷ್ಟ್ರಪತಿಯವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣವು ಆಚ್ಚಾದ 26 ವುಟಗಳಿದ್ದು, ಅಡಳಿತ ಸಂಬಂಧಿಸಿದ ಹಲವಾರು ಅಂಶಗಳನ್ನೂ, ತೃತೀಯ ಆರ್ಥಿಕ ಅಯೋಗವು ನೀಡುವ ಹೆಚ್ಚುವರಿ ಧನ ಸಹಾಯದ ಪ್ರಶ್ನೆಯನ್ನೂ ಪ್ರಸ್ತಾಪಿಸಿ ಎಂಡ ಕೋಟಿ ರೂಪಾಯಿ ಗಳು ದೊರೆತರೂ ಕೂಡ ಈಗಿನ ಪರಿಸ್ಥಿತಿಯಲ್ಲಿ ನ ವ್ಯ ವಶ್ಯಕತೆಗಳಿಗೆ ಅದು ಸಾಕಾಗವುದಿಲ್ಲವೆ ದರು — ಇಂದು ಆಂಧ್ರದಲ್ಲಾದ ವಿಧಾನ ಮಂಡಲದ ಉಭಯ ಸದನಗಳ ಮಾರ್ಚ್ 22 ಕ್ಕೆ ವಂದುವರಿಸಲಾಯಿತು — ಮಹಾರಾಷ್ಟ್ರ ವಿಕೇಕರಣ ಸಮಿತಿಯ ನಾಲ್ಕು ವಂದಿ ಸದಸ್ಯರು ಮಹಾರಾಷ್ಟ್ರದ ರೈತರು ಧರಿಸುವ ರೀತಿಯಲ್ಲಿ ಕೇಸರಿ ಬಣ್ಣದ ರುಮಾಲು ಧರಿಸಿ ಕಾಳಿತಿದ್ದದ್ದು ವಿಶೇಷವಾಗಿದ್ದಿತು — ಸೂರನ ವಿಧಾನ ಸಭೆಯ ಸಭ್ಯರು ಒಕ್ಕು ಮುಂದಿ, ಭಗವಂತನ ಹೆಸರಿನ ಮೇಲೂ, ಕೆಲವರು ಸತ್ಯಸಿಷ್ಠೆಯಿಂದಲೂ ಪ್ರತಿಜ್ಞಾ ವಚನ ಸ್ವೀಕರಿಸಿದರು — ಶ್ರೀ ವೈಕುಂಠ ಬಾಳಿಗ ವಿಧಾನಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು — ವೈಸೂರು ಜಿಲ್ಲೆಯಲ್ಲಿ ಬಸ್ ಸಂಚಾರ ಪೂರ್ಣವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಈಚೆಗೆ ತೀರ್ಮಾನಿಸಿದ ರಾಜ್ಯದ ಫಲಿಗೆ ಕಾರ್ಪೊರೇಷನ್ ತನ್ನ ಈ ನೀತಿಯನ್ನು ಮುಂದಿನ ವರ್ಷ ಮತ್ತೆ ರಡು ಜಿಲ್ಲೆಗಳಿಗೆ ವಿಸ್ತರಿಸಬಹುದೆಂದೂ ರಾಜ್ಯಪಾಲರು ಸೂಚಿಸಿದರು — ಕಡ್ಡಾಯ ಪ್ರಾಥವಿಕ ಶಿಕ್ಷಣವನ್ನು ಜಾರಿಗೆ ತಂದಿರುವುದರಿಂದ ಮುಂದಿನ ವರ್ಷ ಎರಡು ಸಾವಿರ ಮಂದಿ ಶಿಕ್ಷಕರನ್ನು ನೇಮಿಸಿಕೊಳ್ಳಬೇರಾಗುವುದೆಂದೂ ರಾಜ್ಯಪಾಲರು ತಿಳಿಸಿದರು — ಪ್ರಾಥವಿಕ ಹಂತದಿಂದ ಪತ್ಯವುಪ್ತಕಗಳನ್ನು ರಾಷ್ಟ್ರೀಕರಿಸುವ ಕೆಲಸವನ್ನು ಕೈಗೊಳ್ಳಬೇಕೆಂದು ಯೋಚಿಸಲಾಗಿದೆಯೆಂದೂ ರಾಜ್ಯಪಾಲರು ತಿಳಿಸಿದರು.

## ಹೊಸ ರಾಜ್ಯಾಂಗಕ್ಕೆ ಪ್ರತಿಭಟನೆ

ಢಾಕಾ 15— ಇಲ್ಲಿನ ವಿಶ್ವವಿದ್ಯಾಲಯದ ಮೆಡಿಕಲ್ ಮತ್ತು ಎಂಜಿನೀರಿಂಗು ಕಾಲೇಜುಗಳ ವಿದ್ಯಾರ್ಥಿಗಳು ದಿನದ ಮಿಂಚಿನ ಮುಷ್ಕರ ನಡೆಸಿ, ಹೊಸ ರಾಜ್ಯಾಂಗ ಪ್ರತಿಭಟಿಸಿ, ಪಾಕಿಸ್ತಾನಕ್ಕೆ ಪಾರ್ಲಿಮೆಂಟರಿ ಅಥವಾ ಫೆಡರಾಲು ರಾಜ್ಯಾಂಗಕ್ಕೆ ಒತ್ತಾಯಮಾಡಿ, ಹೊಸ ರಾಜ್ಯಾಂಗದ ಎಂಡು ಪ್ರತಿಗಳನ್ನು ಸುಟ್ಟರು.

### ಅಧ್ಯಕ್ಷರ ಭಾಷಣ

ನವದೆಹಲಿ 15— ಹೊಸ ಪಾರ್ಲಿಮೆಂಟನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಏಪ್ರಿಲ್ 18 ರಂದು ಭಾಷಣ ಮಾಡುವರೆಂದು ತಿಳಿಯಬಂದಿದೆ — 17 ರಂದು ಸ್ವೀಕರ ಆಯ್ಕೆ ನಡೆಯುವುದು.

**ಸಾಳೆಯ ಪಂಚಾಂಗ**

ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞಶಿಖಾಮಣ್ಣಿ
ಸಂಪಶ್ಯಪ್ಪಣ್ಣ ಜೋಯಿಸರಿಂದ
17 ಶನಿವಾರ ದ್ವಾದಶಿ ಪುಷ್ಯ

**ಶ್ರೀ ಬಾಲಾಜಿ ಯಾತ್ರಾ ಕಂ**

ತಾ || 21-4-62 ರಲ್ಲಿ
ಬದರೀ, ಕಾಶ್ಮೀರ್, ದ್ವಾರಕ, ಇತ್ಯಾದಿ
70 ದಿನಗಳು, ಜನತಾ ಕ್ಯಾರೇಜಿನಲ್ಲಿ

(2) ತಾ || 29-4-62
ಟೂರಿಸ್ಟ್ ಮತ್ತು 1 st Class
55 ದಿನಗಳಲ್ಲಿ ಬದರೀ, ಕಾಶ್ಮೀರ್
ಅಜ್ಮೀರ್ ಜೈಪುರ್

— ವಿವರಗಳಿಗೆ —

ಎಂ. ಶುಭಾಶಾಸ್ತ್ರಿ
ಶುಭಾಲಯ. Phone 3910
ಶ್ರೀ ಕೆಂಗಲ್ ಹನುಮಂತಯ್ಯ ರೋಡ್
ಬೆಂಗಳೂರು 2

## ಮಂತ್ರಿಪಟ್ಟಿ ಶೀಘ್ರವೇ ಪ್ರಕಟಣೆ

### ಹರಿಜನ ಅರ್ಚಕರು

ದೇವಾಲಯಗಳಲ್ಲಿ ಅರ್ಚಕರಾಗುವ ಶಿಕ್ಷಣವನ್ನು ಹರಿಜನರಿಗೆ ಕೊಡಲು ಸರಕಾರ ಕೂಡಲೇ ಕ್ರಮತೆಗೆದುಕೊಳ್ಳುವುದಾಗಿ ಆಂಧ್ರದ ಧಾರ್ಮಿಕ ಉಂಬಳಿ ಮಂತ್ರಿ ಶ್ರೀಮತಿ ಟಿ ಎಸ್ ಸದಾಲಕ್ಷ್ಮಿಯವರು ನಿನ್ನೆ ಹೈದರಾಬಾದಿನಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು. ಈಗಾಗಲೇ ಕೆಲವು ದೇವಾಲಯಗಳಲ್ಲಿ ಹರಿಜನ ಅರ್ಚಕರು ಇರುವರೆಂದು ಅವರು ಹರಿಜನರಿಗೆ ಮಾತ್ರ ಸೇವೆಮಾಡುತ್ತಿರುವರೆಂದು ತಿಳಿಸಿದರು.

### ಗೋವಧೆ

ಅಲಿಘರ್‌ಕ್ಕೆ ಸುಮಾರು 22 ಮೈಲಿಗಳ ದೂರವಿರುವ ಸಿಕಂದರಾಬಾದಿನಲ್ಲಿ ಮಂಗಳವಾರದಂದು ಕೋಮುವಾರು ಬೆಕ್ಕಟ್ಟುಂಟಾಯಿತು ಪಟ್ಟಣದ ಹೊರ ಭಾಗದಲ್ಲಿ ಗೋವಧೆ ಆದುದೇ ಇದಕ್ಕೆ ಕಾರಣ. ಗೋವಧೆ ಪ್ರತಿಭಟಿಸಿ ಪಟ್ಟಣದಲ್ಲಿ ಕೆಲವು ಅಂಗಡಿಗಳು ಒಂದಾಗಿದ್ದವು. ಕಣ್ಣಾವುಟ್ಟ ಹೊಡೆತಗಳು ವಂದಿ ಆಗಿವೆ ಗೋವಧೆಗೆ ಸಂಬಂಧಿಸಿದ ಈರ್ವರ ಬಂಧನವಾಗಿದೆ ತನಿ ಜೆ ಮಾಡಲು ಸರಕಾರ ಆಜ್ಞೆ ಮಾಡಿದೆ.

★

ವೂರ್ವ ಆಂಡೀಸಿನಲ್ಲಿ ನಿನ್ನೆ ಭೂಪಾತವಾಗಿ 24 ಮಂದಿ ಮಕ್ಕಳು ಸೇರಿ 44 ಹುಂದಿ ಮರಣಹೊಂದಿದರೆಂದು ಪೆರುವಿಸಲಿಮಾದಿಂದ ವಾರ್ತೆ ಬಂದಿದೆ.

ಸರಲಿಯಾಂ ನದಿಯಲ್ಲಿ ಸೋವು ವಾಂ ಮುಳುಗಿ ಮರಣಹೊಂದಿದ ಈರ್ವರು ಇಂಜಿನಿಯರ ದೇಹ ಪತ್ತೆ ಆಗಿವೆ.

ಬಿಹಾರ ವಿಧಾನಸಭೆಗೆ ಆಯ್ಕೆ ಆಗಿರುವ ಶ್ರೀಮತಿ ಮಾಯಾದೇವಿಯವರ ಪತಿ ಶ್ರೀ ಭಗೀರಥ ಚೌದುರಿ ನಿನ್ನೆ ಭಾಗಲ್ಪುರದಲ್ಲಿ ಜೂರಿ ಇರಿತದಿಂದ ಮರಣ ಹೊಂದಿದರು.

ಶ್ರೀಗಳಾದ ಅಬ್ದುಲ್ ಗಫಾರ್ ಮತ್ತು ಮಕ್ಸೂದ್ ಅಲಿ ಖಾನ್‌ರನ್ನು ಮೈಸೂರಿನ ಉಪ ಮಂತ್ರಿಗಳನ್ನಾಗಿ ನೇಮಿಸಿದೆ ಆಯ್ಕೆಗಾಗಿ ಶ್ರೀ ಎಸ್. ನಿಜಲಿಂಗಪ್ಪನವರು ಮತ್ತು ಶ್ರೀ ಬಿ ಡಿ ಜತ್ತಿಯವರು ನಿನ್ನೆ ಬೆಂಗಳೂರಿನಲ್ಲಿ ಸಂದರ್ಶಿಸಿದ್ದರು 5 ಮಂತ್ರಿಗಳು 8 ಉಪ ಮಂತ್ರಿಗಳ ನೇಮಕದಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಆದಷ್ಟು ಬೇಗ ಪಟ್ಟಿ ಅಂತ್ಯವಾಡುತ್ತೇನೆ ಎಂದು ಶ್ರೀ ಎಸ್. ಆರ್ ಕಂಠಿ ತಿಳಿಸಿದರು.

### ವಿಕಸಕಾರ್ಯವಿರಲಿ

ಒಳ ಹಾಗೂ ಹೊರ ಬಿಕ್ಕಟ್ಟುಗಳು ಭಾರತದ ಫೆಡರಲ್ ಆಡಳಿತದ ಮೇಲೆ ತೊಂದರೆ ಆಗಿದೆ. ಆದುದರಿಂದ ಭಾರತಕ್ಕೆಲ್ಲ ವಿಕಸಕಾರ್ಯವಿರಬೇಕು ಎಂದು ನಿನ್ನೆ ಲೋಕಸಭೆಯಲ್ಲಿ ಶ್ರೀ ಸಿ. ಆರ್. ನರಸಿಂಹ ತಿಳಿಸಿದರೆಂದು ನವದೆಹಲಿ ವರದಿ.

### ತೃಪ್ತಿಕರವಾಗಿಲ್ಲ

ಮೊನ್ನೆ ಭಾರತದ ಆಹಾರ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಲೋಕಸಭೆಯಲ್ಲಿ ಅಂದಾಜುಪಟ್ಟಿ ಭಾಷಣವನ್ನು ಮಾಡುತ್ತಾ, ಮುಂದಿನ ಯೋಜನೆಯ ನೆಂವಿಗೆ ಹೊರಗಡೆಯಿಂದ ಆಗುವ ಆಹಾರೋತ್ಪಾದನೆ ತೃಪ್ತಿಕರವಾಗಿಲ್ಲ ಎಂದರು.

### ಮಂತ್ರಿಮಂಡಲ ಸೇರುವುದಿಲ್ಲ

ಉತ್ತರ ಪ್ರದೇಶ ಕಾಂಗ್ರೆಸಿನ ಭಿನ್ನ ಮತೀಯರ ನಾಯಕ ಶ್ರೀ ಕಮಲಾಪತಿಯವರು ಲಕ್ನೋದಲ್ಲಿ ನಿನ್ನೆ ಹೇಳಿಕೆಯಿತ್ತು, ಶ್ರೀ ಬಿ ಗುರುಮೂರ್ತಿ ಮಂತ್ರಿಮಂಡಲಕ್ಕೆ ತಾವು ಸೇರುವುದಿಲ್ಲವೆಂದು ತಿಳಿಸುವುದಾಗಿ ಲಕ್ನೋ ವಾರ್ತೆ.

## ಹೊಸ ಒಂದು ಪೈಸಾ ನಾಣ್ಯ

ನವದೆಹಲಿ 15— ಮುಂದಿನ ಗುರುವಾರ ಅಂದರೆ ಮಾರ್ಚ್ 22 ರಿಂದ ಭಾರತದ ರಿಸರ್ವ್ ಬ್ಯಾಂಕು ಮುಂಬೈನಲ್ಲಿ ನಿಕ್ಕಲ್-ಹಿತ್ತಾಳೆ ಲೋಹದ ಹಳದಿ ಬಣ್ಣದ ಒಂದು ಸಯ ಪೈಸ ನಾಣ್ಯಗಳನ್ನು ಚಲಾವಣೆಗೆ ತರಲಿದೆ : ಕ್ರಮೇಣ ಈ ಹೊಸ ನಾಣ್ಯವನ್ನು ರಿಸರ್ವ್ ಬ್ಯಾಂಕಿನ ಇತರ ಇಷ್ಯೂ ಕಚೇರಿಗಳೂ ಚಲಾವಣೆಗೆ ತರುವುವು.

★

## ರಾಜಾಘಾಟ್‌ನಲ್ಲಿ ಶ್ರೀಮತಿ ಕೆನೆಡಿ

ನವದೆಹಲಿ 12— ಶ್ರೀಮತಿ ಕೆನಡಿಯವರು ಮೋಟಾರು ಕಾರಿನಲ್ಲಿ ರಾಷ್ಟ್ರಪತಿ ಭವನದಿಂದ ರಾಜಾಘಾಟಿಗೆ ಹೋಗಿ ಮಹಾತ್ಮ ಗಾಂಧಿಯವರ ಸಮಾಧಿಯ ಮೇಲೆ ಬಿಳಿಗ ಲಾಬಿಗಳ ದಂಡೆಯನ್ನಿಟ್ಟರು ; ಗಾಂಧಿಜಿಯವರ ಸಮಾಧಿಯ ಬಳಿ ಒಂದು ನಿಮಿಷದವರೆಗೆ ಮೌನವಾಗಿ ನಿಂತುಕೊಂಡಿದ್ದರು — ರಾಜಾಘಾಟಿನಲ್ಲಿ, ಮಹಾತ್ಮಾ ಗಾಂಧಿಯವರು ಬರೆದ ಅರು ಪುಸ್ತಕಗಳನ್ನು, ಮಹಾತ್ಮಾ ಗಾಂಧಿಯವರನ್ನು ಕುರಿತು ಬರೆಯಲಾದ ಎರಡು ಪುಸ್ತಕಗಳನ್ನೂ ಮತ್ತು ಗಾಂಧೀಜಿಯವರ ಜೀವನದ ಮುಖ್ಯಾಂಶಗಳನ್ನು ವಿವರಿಸುವ ಫೋಟೋಗ್ರಾಫ್‌ಗಳ ಒಂದು ಆಲ್ಬಮನ್ನೂ ಅವರಿಗೆ ಸಮರ್ಪಿಸಲಾಯಿತು.

★

## ಪುಷ್ಪರ್‌ಟ್ಟೊಲಿನ ಶಿಶುರಕ್ಷಣಾ ಕೇಂದ್ರ – ಅತಿಥಿಗಳ ಸ್ವೇಚ್ಛಾ ವಿಹಾರ

ಪುಷ್ಪರ್‌ಟ್ಟೊಲ್ ( ಡಾಡ್ ) ಉತ್ತರ ನದಿಯ ತೀರದಲ್ಲಿ, ಸುಂದರ ದೃಶ್ಯಾವಳಿಗಳ ನಡುವೆ, ಪರ್ವತ ಪ್ರಾಂತ್ಯದಲ್ಲಿ ಒಂದು ವಿನೂತನವಾದ ಹೋಟೆಲನ್ನು ನಡೆಸಲಾಗುತ್ತದೆ. ಅಲ್ಲಿಗೆ ಹೋದ ಅತಿಥಿಗಳು ಮನಸ್ವೀ ಸ್ವೇಚ್ಛಾವಿಹಾರ ನಡೆಸಬಹುದು, ಅದಕ್ಕೆ ಯಾವ ಅಡ್ಡಿಆತಂಕವೂ ಇಲ್ಲ; ಅತಿಥಿಗಳು ಮನಬಂದಂತೆ ಹಾಡಬಹುದು ; ಇನ್ನೂ ಹೆಚ್ಚೆಂದರೆ, ಅವರು ಇಷ್ಟಪಟ್ಟಲ್ಲಿ ಹೋಟೆಲಿನ ದಾದಿಯರನ್ನು ಎಲ್ಲರೆದುರಿನಲ್ಲಿಯೇ ಅಲಂಗಿಸಲೂ ಬಹುದು : ಇಷ್ಟು ದುಂಡಾವರ್ತಿ ಮಾಡಿದರೂ ಹೋಟೆಲಿನ ಕಾರ್ಯನಿರ್ವಾಹಕ ವರ್ಗದವರು ಅತಿಥಿಗಳ ಮೇಲೆ ಕೋಪಿಸಿಕೊಳ್ಳುವ ಬದಲು ಇನ್ನೂ ಹೆಚ್ಚಿನ ಪ್ರೇಮವನ್ನು ತೋರುತ್ತಾರೆ : ಆಶ್ಚರ್ಯವೆನಿಸಬಹುದಲ್ಲವೆ? ಆದರೆ ಇಲ್ಲಿ ಬರುವ ಅತಿಥಿಗಳೆಂದರೆ, ಎರಡು ವರ್ಷಗಳೊಳಗಣ ಶಿಶುಗಳು ಮಾತ್ರ — ಜರ್ಮನಿಯಲ್ಲಿ ಇಂತಹ ಹತ್ತಿಪ್ಪತ್ತು ಹೋಟಲುಗಳಿವೆ : ಇಲ್ಲಿಗೆ ಬರುವವರ ವಯೋಮಿತಿ ಹತ್ತುತಿಂಗಳಿಂದ ಎರಡು ವರ್ಷಗಳ ಒಳಪಟ್ಟು ಬೇಕು ; ಸರಿಯಾದ ಲಕ್ಷಣಗಳಿಲ್ಲದೆ ಸದಾ ಯಾವುದಾದರೊಂದು ವ್ಯವಹಾರದಲ್ಲಿ ಮುಳುಗಿರುವ ತಂದೆತಾಯಿಗಳು ಇಂತಹ ಹೋಟಲುಗಳನ್ನು ಸ್ವಾಗತಿಸುತ್ತಾರೆ — ಈ ಹೋಟೆಲಿನ ಕೊಠಡಿಗಳೆಲ್ಲವೂ ಶುದ್ಧವಾದ ಗಾಳಿ ಬೆಳಕಿನಿಂದ ಕೂಡಿವೆ ; ಅವುಗಳಲ್ಲಿ ಬೇಕಾದಂತೆ ಗೊಂಬೆಗಳನ್ನೂ ಆಟದ ಸಾಮಾನುಗಳನ್ನೂ ಇಡಲಾಗಿದೆ ; ಕೊಠಡಿಯ ಯಾವುದೇ ಭಾಗದಲ್ಲಿ ಬಿದ್ದರೂ ಮಕ್ಕಳಿಗೆ ತೊಂದರೆಯಾಗದಂತೆ ನೆಲ ಗೋಡೆಗಳನ್ನು ಸಜ್ಜು ಗೊಳಿಸಲಾಗಿದೆ

**Both for the child and the mother ...**

Here is a rich, palatable, nutritive, vitamin-fortified food that children will love and thrive on! For nursing and expectant mothers too, this is ideal!

TRADE MARK

**EXTRACT of MALT with COD LIVER OIL**

THE MYSORE INDUSTRIAL & TESTING LABORATORY LTD. BANGALORE-3.

*Madras Sales Office:-* 35/37, THAMBU CHETTY STREET, MADRAS-1.

Our Bangalore Sales Depot address—
71 / 4 Arcot Sreenivasachar St., Bangalore 2.

**ವುಡ್‌ಲ್ಯಾಂಡ್ಸ್** ತೇಜಸ್ವಿ 6 ನೇ ವಾರ

**ಜಂಗ್ಲಿ (ಹಿಂದಿ) Junglee**

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ ದಿನವಹಿ 3 ಪ್ರದರ್ಶನಗಳು ]

**ಅಪೆರಾ— 15-3-62 ರಿಂದ**

**ಅಡುತ ವೀಟು ಪೆಣ್** ( ತಮಿಳು )

ಪಾತ್ರ— ಅಂಜಲೀದೇವಿ, ಟಿ. ಆರ್. ರಾಮಚಂದರ್, ಫ್ರೆಂಡ್ ರಾಮಸ್ವಾಮಿ

ಕರುಣಾನಿಧಿ [ ದಿನವಹಿ 3 ಆಟಗಳು ]

**SHAKTI**

**SUDHA**

**A Superb Tonic**


## Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.